# ಶ್ರೀರಾಮಕೃಷ್ಣರನ್ನು ಕುರಿತು ಒಂದು ಚಿಂತನೆ

ಎಸ್.ಎ.ಶಾಮರಾವ್

**ಶ್ರೀರಾಮಕೃಷ್ಣರ ಅವತಾರ ವೈಶಿಷ್ಟ್ಯವನ್ನು ನಿರೂಪಿಸಿರುವ ಶ್ರೀ ಶಾಮರಾವ್ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.**

ಸಹಜವಾಗಿ ಹರಿವ ನೀರು ಶುದ್ಧ, ಪರಿಶುದ್ಧ. ಹಳ್ಳ ಕೊಳ್ಳಗಳಲ್ಲಿ ಹರಿದು ನದಿಯಾಗಿ ಹರಿಯುತ್ತಾ ತನ್ನ ಗುರಿಯಾದ ಸಾಗರವನ್ನು ಸೇರುತ್ತದೆ. ತಾನು ಹರಿವೆಡೆಯೆಲ್ಲಾ ಸುತ್ತಮುತ್ತಲಿನ ಭೂಮಿಯನ್ನೆಲ್ಲಾ ಹಚ್ಚಹಸಿರಾಗಿಸುತ್ತದೆ, ಆಸುಪಾಸಿನಲ್ಲಿ ವಾಸಿಸುವ ಜನಜಾನುವಾರುಗಳಿಗೆ, ಪಶುಪಕ್ಷಿಗಳಿಗೆ ಪ್ರಾಣದಾಯಿಯಾಗುತ್ತದೆ. ಅದು ಬಿಟ್ಟು, ನೀರು ನಿಂತು ಮಡುಗಟ್ಟಿದರೆ ಪಾಚಿ ಕಟ್ಟುತ್ತದೆ, ಕ್ರಮೇಣ ನಾರುತ್ತದೆ, ದುರ್ಗಂಧ ಬೀರುತ್ತದೆ. ಇದರಿಂದ ಜೀವಜಗತ್ತಿಗೆ ಪ್ರಾಣದಾಯಿಯಾಗಿದ್ದುದು, ಪರಿಸರ ಮಾಲಿನ್ಯದಿಂದಾಗಿ ಪ್ರಾಣಾಂತಿಕ ಪರಿಣಾಮವುಂಟಾಗುತ್ತದೆ. ಈ ಸ್ಥಿತಿ ತಲುಪಿದಾಗ, ಕಳೆ ಕಿತ್ತೆಸೆಯಬೇಕು, ರಾಡಿ ಹೂಳು ತೆಗೆದೊಗೆಯಬೇಕು, ನೀರು ಹರಿಯಬಿಡಬೇಕು. ಆಗ ಪುನಃ ನೀರು ಶುದ್ಧವಾಗಿ ಜೀವಂತವಾಗುತ್ತದೆ, ಆರೋಗ್ಯಕರವಾಗುತ್ತದೆ. ಇದಕ್ಕೆ ತುಂಬಾ ಶ್ರಮ ವಹಿಸಬೇಕು, ಸಾಧನ ಸಂಪತ್ತು ಬೇಕು. ಅಂತೆಯೇ, ಜಗತ್ತಿನಲ್ಲಿ ಧರ್ಮ ನಿಂತ ನೀರಾದಾಗ, ಪಾಚಿ ಸರಿಸಿ ಕಳೆ ತೆಗೆದು, ಹೂಳನೆತ್ತಿ, ಧರ್ಮವನ್ನು ಚಲನಶೀಲವನ್ನಾಗಿಸಲು ಮಹಾ ಚೇತನಗಳಿಗೆ ಮಾತ್ರ ಸಾಧ್ಯ. ಅಂಥ ಒಂದು ಮಹಾಚೇತನ ಶ್ರೀರಾಮಕೃಷ್ಣರು.

ಶ್ರೀರಾಮಕೃಷ್ಣರು ಹುಟ್ಟಿದ್ದು ಒಂದು ಸಣ್ಣ ಗ್ರಾಮದಲ್ಲಿ, ಒಂದು ಬಡಕುಟುಂಬದಲ್ಲಿ. ಪ್ರಾಸಂಗಿಕವಾಗಿ ಬಂದು ನೆಲೆ ನಿಂತಿದ್ದು ಕಲ್ಕತ್ತೆಯಲ್ಲಿ, ಗಂಗೆಯ ತಡಿಯಲ್ಲಿ ದಕ್ಷಿಣೇಶ್ವರ ಎಂಬ ಜಾಗದಲ್ಲಿದ್ದ ಕಾಳಿ ಗುಡಿಯಲ್ಲಿ, ಕೇವಲ ಪೂಜಾರಿಯಾಗಿ. ಅಲ್ಲಿಗೆ ಬಂದ ಹತ್ತು ಹಲವು ಮಂದಿ ಮಹನೀಯರ ಮಾರ್ಗದರ್ಶನದಿಂದ ತಮ್ಮ ಮನಸ್ಸಿಗೆ ಸರಿಯೆಂದು ತೋರಿದಂತೆ ಸಾಧನೆಗೈದರು. ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಹಂಬಲ ತೀವ್ರತೆಯನ್ನು ಪಡೆಯುತ್ತಾ ಹೋಯಿತು. ಜಪತಪ ಅನುಷ್ಠಾನಾದಿಗಳನ್ನು ಏಕಾಗ್ರತೆಯಿಂದ, ತೀವ್ರ ವ್ಯಾಕುಲತೆಯಿಂದ ನಡೆಸಿದರು. ಆ ತೀವ್ರ ವೈರಾಗ್ಯ, ಅತೀವ ವ್ಯಾಕುಲತೆ ಮಾತಿಗೆ ಮೀರಿದ್ದು. ಭಕ್ತಿ-ಕರ್ಮ-ಜ್ಞಾನಯೋಗಗಳಷ್ಟೇ ಅಲ್ಲದೆ ಎಲ್ಲ ಧರ್ಮಗಳ ಮೂಲಕವೂ ಸಾಕ್ಷಾತ್ಕಾರದ ಚರಮಾವಸ್ಥೆಯನ್ನು ಪಡೆದ ಸಮನ್ವಯಕಾರರು ಎಂದು ಬಹುಜನ ಅವರನ್ನು ಬಣ್ಣಿಸುತ್ತಾರೆ. ಈ ಬಗ್ಗೆ ಮಾತನಾಡುವಾಗ ಒಮ್ಮೆ ಶ್ರೀಮಾತೆ ಶಾರದಾದೇವಿಯವರು "ಅವರಲ್ಲಿ ಎಲ್ಲ ಧರ್ಮಗಳನ್ನೂ ಪ್ರಯೋಗಾತ್ಮಕ ದೃಷ್ಟಿಯಿಂದ ನೋಡುವ ಆಸಕ್ತಿ ಇತ್ತು ನಿಜ. ಆದರೆ ಎಲ್ಲಕ್ಕೂ ಮಿಗಿಲಾಗಿ ಅವರ ಜೀವನದಲ್ಲಿ ಎದ್ದು ಕಾಣುತ್ತಿದ್ದುದು ತ್ಯಾಗ. ತ್ಯಾಗವೇ ಅವರ ಉಸಿರಾಗಿತ್ತು. ಇದು ಅವರ ಜೀವನದ ಸಾರ" ಎಂದು ಹೇಳಿದ್ದಾರೆ.

ಶ್ರೀರಾಮಕೃಷ್ಣರಲ್ಲಿ ಜಪ-ತಪ-ಧ್ಯಾನಾದಿಗಳ ತೀವ್ರತೆಯ ಬೇಗೆಯಲ್ಲಿ ತಾಪತ್ರಯಗಳೆಲ್ಲ ಸುಟ್ಟು ಬೂದಿಯಾದವು. ಈ ಬೂದಿಯೇ ಗೊಬ್ಬರವಾಗಿ ವನಸುಮವೊಂದು ಸಹಸ್ರ ದಳದಲ್ಲಿ ಅರಳಿನಿಂತು ನಾಲ್ದೆಸೆಗಳಿಗೂ ತನ್ನ ಪರಿಮಳವನ್ನು ಪಸರಿಸತೊಡಗಿತು. ಇದರ ಆಕರ್ಷಣೆಯಿಂದ, ಜನ-ದುಂಬಿ ತುಂಬಿನಿಂತ ಹೂವಿನೆಡೆಗೆ ಬರತೊಡಗಿತು. ಬಂದವರೊಡನೆ ಮಾತನಾಡತೊಡಗಿದಾಗ ಶ್ರೀರಾಮಕೃಷ್ಣರು ಆಡಿದ ಮಾತೆಲ್ಲ ಮಂತ್ರವಾಯ್ತು, ಉಸಿರಾಡಿದ ಪರಿಸರವೆಲ್ಲ ಪಾವನವಾಯ್ತು.

> ಶ್ರೀರಾಮಕೃಷ್ಣರು ಆಡಿದ ಮಾತೆಲ್ಲ ಮಂತ್ರವಾಯ್ತು, ಉಸಿರಾಡಿದ ಪರಿಸರವೆಲ್ಲ ಪಾವನವಾಯ್ತು.

ಅವರೊಡನೆ ಮಾತನಾಡಿದವರು, ಒಡನಾಡಿದವರು ಜೀವನ ಸಾರ್ಥಕವಾಯಿತೆಂದುಕೊಂಡರು. ಈ ಮಹಾಚೇತನದ ಇರುವಿಕೆಯಿಂದ, ಭಾರತದಲ್ಲಿ, ಹಾಗೂ ವಿಶ್ವದಲ್ಲಿ ಮಡುಗಟ್ಟಿದ್ದ ಜೀವ-ಜಲ ಚಲನಶೀಲವಾಯ್ತು. ಭಾರತ ಬ್ರಿಟಿಷರ ಗುಲಾಮಗಿರಿಯಿಂದ ಬಿಡುಗಡೆಗೊಂಡು ಸ್ವತಂತ್ರವಾಗಿ ಉಸಿರಾಡತೊಡಗಿತು. ಇಡೀ ಜಗತ್ತಿನಲ್ಲೇ ಏನೋ ಒಂದು ಜಾಗೃತಿ ಮೂಡತೊಡಗಿತೆಂದು ಹೇಳಬಹುದು. ಈ ಬದಲಾವಣೆ ಪರಿವರ್ತನೆ ಯಾರ ಕಣ್ಣಿಗೂ ಕಾಣಿಸುವುದಿಲ್ಲ.

ಶ್ರೀರಾಮಕೃಷ್ಣರು ಬಾಲಕರಾಗಿದ್ದಾಗಿನಿಂದಲೇ ಚೇತೋಹಾರಿಯಾದ ಹೊಸಗಾಳಿ ಬೀಸುವಂತೆ ಮಾಡಿದವರೆಂಬುದನ್ನು ನೋಡಬಹುದು. ತಮಗೆ ಉಪನಯನವಾದಾಗ, ಬಾಲ್ಯದಲ್ಲಿ, ಹೆತ್ತ ತಾಯಿಯಂತೆಯೇ ವಾತ್ಸಲ್ಯದಿಂದ ಎತ್ತಿ ಆಡಿಸಿದ್ದ ಕೆಲಸದಾಳಾದ ಶೂದ್ರ ಹೆಂಗಸು ಧನಿಗೆ ಮಾತು ಕೊಟ್ಟಿದ್ದಂತೆ, ಅವಳಿಂದಲೇ ಮೊದಲ ಭಿಕ್ಷೆಯನ್ನು ಪಡೆದರು. (ಸಂಪ್ರದಾಯದಂತೆ ಅದು ಹೆತ್ತ ತಾಯಿಯ ಹಕ್ಕು). ಬಾಲಕರಾಗಿದ್ದಾಗ, ಜಾತಿ-ಮತ, ಬಡವ-ಬಲ್ಲಿದ, ಗಂಡು-ಹೆಣ್ಣು ಯಾವ ಭೇದಭಾವವಿಲ್ಲದೆ ಎಲ್ಲರ ಕಣ್ಮಣಿಯಾಗಿ ಬೆಳೆದರು. ಮುಂದೆಯೂ ಹಾಗೆಯೇ ಬೆಳಗಿದರು. ಅವರಿದ್ದ ಗ್ರಾಮದ ಬಳಿ ತಂಗಿ ಹೋಗುತ್ತಿದ್ದ ಯಾತ್ರಾರ್ಥಿಗಳಾದ ಎಲ್ಲ ರೀತಿಯ ಭಿನ್ನ-ಭಿನ್ನ ಸಂಪ್ರದಾಯದ ಸಾಧು ಸಂತರೊಡನೆ ಬೆರೆತು, ತಮ್ಮ ಮೃದು-ಮಧುರ ನಡೆ ನುಡಿಗಳಿಂದ ಮೆಚ್ಚುಗೆ ಗಳಿಸಿ, ಅವರಿಂದ ತಮ್ಮ ಬಾಳಿಗೆ ಒಳಿತಾದುದನ್ನೆಲ್ಲಾ ತಿಳಿದುಕೊಂಡು ತಮ್ಮ ನಡೆನುಡಿಯಲ್ಲಿ ರೂಢಿಸಿಕೊಂಡರು. ಅಂತೆಯೇ ಮುಂದೆ,

ಶ್ರೀರಾಮಕೃಷ್ಣರ ಬಳಿ ಎಷ್ಟು ರೀತಿಯ ಜನ ಆಕರ್ಷಿತರಾಗಿ ಬಂದರು! ಬಂದವರಲ್ಲಿ ಎಷ್ಟು ವೈವಿಧ್ಯ! ಅವರೊಡನೆ ಸಂಪರ್ಕಕ್ಕೆ ಬಂದವರೆಲ್ಲ ಒಂದೆಡೆ ಸೇರಿದಂತೆ ಭಾವಿಸಿದರೆ, ಒಂದು ವಿವಿಧ ವೇಷಸ್ಪರ್ಧೆಯ ಸಂತೆಯಂತೆ ಕಂಡು ಬರುತ್ತದಲ್ಲವೇ? ಕಾರಣ, ಶ್ರೀರಾಮಕೃಷ್ಣರು ಜಾತಿ-ಮತ-ಪಂಥ, ಕಾಲ-ದೇಶ—ಎಲ್ಲವನ್ನೂ ಮೀರಿ ನಿಂತವರು. ಅನೇಕರು ಸಾಮಾನ್ಯವಾಗಿ ಸಾಧು-ಸಂತರನ್ನು ಇವನು ಹಿಂದೂ ಸಾಧು ಅಥವಾ ಸಂತ, ಮತ್ತೊಬ್ಬ ಮುಸ್ಲಿಂ ಸೂಫಿ ಅಥವಾ ಸಾಧು, ಮಗದೊಬ್ಬ ಕ್ರಿಶ್ಚಿಯನ್ ಸಂತ ಎಂದು ನಿರ್ದೇಶಿಸುವುದುಂಟು. ವಾಸ್ತವವಾಗಿ ಹಾಗೆ ಕರೆಯುವುದು ಸರಿಯಲ್ಲ ವೆನಿಸುತ್ತದೆ. ನಿಜ, ಅವರು ಪ್ರಾಸಂಗಿಕವಾಗಿ ಒಂದು ಜಾತಿಯಲ್ಲಿ, ಒಂದು ಪ್ರದೇಶದಲ್ಲಿ, ಒಂದು ಕಾಲದಲ್ಲಿ ಹುಟ್ಟಿರುತ್ತಾರೆ. ಆದರೆ ನಿಜವಾದ ಸಾಧುಗಳು ಅವನ್ನೆಲ್ಲಾ ದಾಟಿಬಿಟ್ಟಿರುತ್ತಾರೆ! ಇಡೀ ಜಗತ್ತೇ ಅವರದಾಗಿರುತ್ತದೆ, ಅವರಲ್ಲಿ ಇಡೀ ಜಗತ್ತೇ ಅಡಗಿರುತ್ತದೆ.

ಶ್ರೀರಾಮಕೃಷ್ಣರ ಇಡೀ ಜೀವನವನ್ನು ಅವಲೋಕಿಸಿದಾಗ, ಅವರು ಬಾಹ್ಯ ಆಚಾರಗಳಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟವರಲ್ಲ ಎಂಬುದು ಕಂಡುಬರುತ್ತದೆ. ಬಾಹ್ಯಾಚಾರಗಳು ಸಂಪೂರ್ಣ ತಪ್ಪು, ಅವುಗಳನ್ನು ಕಡೆಗಣಿಸಬೇಕೆಂದೂ ಹೇಳುವುದಿಲ್ಲ. ಈಗ ನಾವು ನೋಡುತ್ತಿರುವಂತೆ, ಹಬ್ಬ-ಹರಿದಿನಗಳಲ್ಲಿ ವ್ರತನೇಮಗಳ ಹೆಸರಿನಲ್ಲಿ ಬಾಹ್ಯಾಡಂಬರವೇ ಎದ್ದು ಕಾಣಿಸುತ್ತದೆ, ಕೇವಲ ಬೇರೆಯವರ ಮೆಚ್ಚುಗೆ ಗಳಿಸುವುದರಲ್ಲಿಯೇ ಎಲ್ಲವೂ ಪರ್ಯವಸಾನವಾಗುತ್ತವೆ. ಎಲ್ಲೆಂದರಲ್ಲಿ ಹ್ಯಾಗೆಂದರೆ ಹಾಗೆ ಗುಡಿಗೋಪುರಗಳನ್ನು ಕಟ್ಟುವುದು, ಉತ್ಸವ ಜಾತ್ರೆಗಳ ಹೆಸರಿನಲ್ಲಿ ಅನುಚಿತ ಪೈಪೋಟಿ ನಡೆಸುತ್ತ, ಹುಚ್ಚೆದ್ದು ಕುಣಿದಾಡುವುದು, ಇತ್ಯಾದಿಗಳೇ ಎಲ್ಲೆಲ್ಲಿಯೂ. ಇವುಗಳು ನಡೆಯುವುದು ಶೇಕಡ ತೊಂಭತ್ತು-ತೊಂಭತ್ತೈದರಷ್ಟು ಕೇವಲ ಒಣ ಪ್ರತಿಷ್ಠೆಗಾಗಿ, ಕೀರ್ತಿಗಾಗಿ, ಹಣಕಾಸು ಇನ್ನಿತರ ದುರ್ಲಾಭಕ್ಕಾಗಿ, ಮತ್ತು ಒಂದಷ್ಟು ಜನ ರಾಜಕೀಯ ಹುನ್ನಾರಗಳ ಸಲುವಾಗಿ. ಇದರಿಂದಾಗಿ, ನಾವು ತಿರುಳನ್ನು ತಿಪ್ಪೆಗೆಸೆಯುತ್ತಿದ್ದೇವೆ, ಕರಟವನ್ನು ಹಿಡಿದುಕೊಂಡು ಭಜಿಸುತ್ತಿದ್ದೇವೆ. ಆದರೆ ನಾವು ಜೀವನದಲ್ಲಿ ನಿಜವಾಗಿ ಅಳವಡಿಸಿಕೊಳ್ಳಬೇಕಾದ್ದು, ಗಮನ ಕೊಡಬೇಕಾದ್ದು ಅಂತಃಶುಚಿಗೆ, ಚಿತ್ತ ಶುದ್ಧಿಗೆ. ಆದರೆ ಭಗವಂತನನ್ನು ಕಾಣುವ ಹಂಬಲದಲ್ಲಿ ಹುಚ್ಚೆದ್ದು ಕುಣಿಯುವವರು ಅಪರೂಪಕ್ಕೆ ಆಗೊಬ್ಬ-ಈಗೊಬ್ಬರು, ಅಲ್ಲೊಬ್ಬ, ಇಲ್ಲೊಬ್ಬರು ಕಾಣಸಿಗುತ್ತಾರೆ.

ಆಚಾರ ವಿಚಾರಗಳೆಲ್ಲಾ ನಿಂತ ನೀರಾಗದಂತೆ, ಮಡುಗಟ್ಟದಂತೆ ನೋಡಿಕೊಳ್ಳಬೇಕು. ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ ಎಂದು, ಓಗ್ಗದೆಯೇ ಕುಗ್ಗದೆಯೇ ನಡೆಯುತ್ತಾ ಓಡುತ್ತಾ ಹೋಗುತ್ತಿರಬೇಕು. ಹೀಗೆ ತೀವ್ರತೆಯಿಂದ ಹುಚ್ಚು ಹಿಡಿದಂತೆ ಹೋರಾಡುತ್ತಿದ್ದಂತೆಯೇ ಗಕ್ಕನೇ ಬ್ರೇಕ್ ಹಾಕಿದಂತಾಗುತ್ತದೆ. ಆಗ ಎಲ್ಲ ಸ್ಥಗಿತವಾಗುತ್ತದೆ. ಆಗ ಎಲ್ಲ ಸಾಧನೆಗೆ ನಿಲುಗಡೆ. ಈ ಬ್ರೇಕ್ ಯಾರಿಗೆ, ಯಾವಾಗ, ಹೇಗೆ ಬರುತ್ತದೆಂದು ಮಾತ್ರ ಹೇಳಲಾಗುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, "ಸಂಧ್ಯೆ ಗಾಯತ್ರಿಯಲ್ಲಿ ಲಯಗೊಳ್ಳುತ್ತದೆ, ಗಾಯತ್ರೀ ಓಂಕಾರದಲ್ಲಿ ಲಯಗೊಳ್ಳುತ್ತದೆ ಮತ್ತು ಓಂಕಾರವು ಪರಬ್ರಹ್ಮನಲ್ಲಿ ಲಯಗೊಳ್ಳುತ್ತದೆ." ತನ್ನ ಪಾಲಿಗೆ ಬಂದದ್ದನ್ನು ನಿಷ್ಠೆಯಿಂದ ಮಾಡುತ್ತಾ, ಸಾಧನೆಯಲ್ಲಿ ನಿರತನಾಗಿ, ಅದರಲ್ಲಿ ತೀವ್ರತೆ ಗಳಿಸಿಕೊಳ್ಳುತ್ತಿದ್ದಂತೆ, ಕರ್ಮವೆಲ್ಲ ಒಂದೊಂದಾಗಿ, ಅಥವಾ ಇಡಿಯಾಗಿ ಕಳಚಿಹೋಗುತ್ತದೆ. ಆಗವನು ಏನು ಮಾಡಿದರೂ ನಡೆಯುತ್ತದೆ, ಯಾವ ಕರ್ಮಬಂಧನವೂ ಇಲ್ಲದೆ ಅಂಥ ವ್ಯಕ್ತಿ "ಇರು"ತ್ತಾನೆ. ಯಾವುದನ್ನು ಜೀವನ್ಮುಕ್ತಿ ಎಂದು ಹೇಳಲಾಗುತ್ತದೋ ಅಂಥ "ಇರುವಿಕೆ"ಯಲ್ಲಿ ಆ ವ್ಯಕ್ತಿ ಇರುತ್ತಾನೆ. ಅಂತಹ ಮಹಾಚೇತನಗಳಲ್ಲಿ ಶ್ರೀರಾಮಕೃಷ್ಣರೂ ಒಬ್ಬರು. ಅವರಲ್ಲಿ ತ್ಯಾಗ, ವೈರಾಗ್ಯ ಪರಾಕಾಷ್ಠೆಯನ್ನು ಮುಟ್ಟಿತ್ತು. ಆದರೆ ಜಗತ್ತು ಮತ್ತು ಜನರ ಬಗ್ಗೆ ಉದಾಸೀನತೆಯೇನೂ ಇರಲಿಲ್ಲ.

"ಈ ಜಗತ್ತು ಮಾಯೆಯಲ್ಲದೆ, ಸತ್ಯಸ್ಯ
ಸತ್ಯವಾಗಿದ್ದಿದ್ದರೆ ನನ್ನ ಹುಟ್ಟೂರು
ಕಾಮಾರಪುಕುರವನ್ನು ಬಂಗಾರದ ತಗಡಿನಿಂದ
ಹೊದಿಸಿಬಿಡುತ್ತಿದ್ದೆ!"
— ಶ್ರೀರಾಮಕೃಷ್ಣ

ಶ್ರೀರಾಮಕೃಷ್ಣರು ಮನಸ್ಸು ಮಾಡಿದ್ದರೆ, ತಮ್ಮ ಇಚ್ಛಾಶಕ್ತಿಯಿಂದ ಪ್ರಪಂಚದ ಎಲ್ಲ ಜನರನ್ನೂ ತಮ್ಮತ್ತ ಸೂಜಿಗಲ್ಲಿನಂತೆ ಆಕರ್ಷಿಸಿ, ಹೆಮ್ಮೆ ಮತ್ತು ಗರ್ವದಿಂದ ಬೀಗಬಹುದಿತ್ತು. ಆದರೆ ಇಂಥ ಕೀರ್ತಿ-ಪ್ರತಿಷ್ಠೆಗಳು ಕೇವಲ ಅಲ್ಪಕಾಲದ್ದು ಎಂಬ ಅರಿವು ಅವರಿಗೆ ಸ್ಪಷ್ಟವಾಗಿತ್ತು. ಅವರೊಮ್ಮೆ ಹೇಳಿದ್ದುಂಟು : "ಈ ಜಗತ್ತು ಮಾಯೆಯಲ್ಲದೆ, ಸತ್ಯಸ್ಯ ಸತ್ಯವಾಗಿದ್ದಿದ್ದರೆ ನನ್ನ ಹುಟ್ಟೂರು ಕಾಮಾರಪುಕುರವನ್ನು ಬಂಗಾರದ ತಗಡಿನಿಂದ ಹೊದಿಸಿಬಿಡುತ್ತಿದ್ದೆ!"

ಇಂದು ಭಾರತದಲ್ಲಿ ಹಾಗೂ ವಿಶ್ವದಾದ್ಯಂತ ವಿವಿಧ ಗುಡಿಗುಡಾರಗಳಲ್ಲಿ ಆರಾಧ್ಯ ದೇವಮೂರ್ತಿಗಳನ್ನು ವಜ್ರ ವೈಡೂರ್ಯ ಆಭರಣಗಳಿಂದ ಅಲಂಕರಿಸುವುದು, ಗುಡಿಗೋಪುರಗಳಿಗೆ ಬಂಗಾರದ ತಗಡನ್ನು ಹೊದಿಸುವುದು, ಬೆಳ್ಳಿ ಯಾ ಚಿನ್ನದ ರಥಗಳನ್ನು ಮಾಡಿಸುವುದು ಇತ್ಯಾದಿಗಳನ್ನು ಹಮ್ಮಿಕೊಳ್ಳುವವರು ಈ ಮಾತುಗಳನ್ನು ಗಮನಿಸಿದರೆ ಒಳಿತೆನಿಸುತ್ತದೆ.

ಒಂದು ಪುಟ್ಟ ಗ್ರಾಮದಲ್ಲಿ ಗದಾಧರನಾಗಿ ಹುಟ್ಟಿದ ಒಂದು ಜೀವ ಬೆಳೆಯುತ್ತ ಬೆಳೆಯುತ್ತ ತ್ರಿವಿಕ್ರಮನಾಗಿ ಬೆಳೆದು, ಶ್ರೀರಾಮಕೃಷ್ಣ ಪರಮಹಂಸರಾಗಿ ಬೆಳಗಿದರು. ಅವರು ಅನೇಕ ಸಾಧು-ಸಂತರ ಮಾರ್ಗದರ್ಶನ ಪಡೆದರು, ನಿಜ. ಆದರೆ ಸಾಧನೆಯಲ್ಲಿ ತಮ್ಮದೇ ಆದ ದಾರಿಯನ್ನು ಮಾಡಿಕೊಂಡು ಯಾವ ಅಳುಕೂ ಇಲ್ಲದೆ, ಥಳಕು-ಬಳುಕುಗಳಿಗೆ ಮಾರುಹೋಗದೆ ಮುನ್ನಡೆದರು, ಜೀವನ್ಮುಕ್ತರಾದರು, ಧನ್ಯರಾದರು, ಅವತಾರಪುರುಷರೆನಿಸಿಕೊಂಡರು. ❑